9.**ವಿಷಯ:** ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕೃಷಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ ಕೃಷಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕೃಷಿ ಸಚಿವರ ಗಮನಗಳನ್ನು ಸೆಳೆಯುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಮತ್ತು ಆಹಾರ ಸಂಸ್ಕರಣೆ ಸಚಿವರು):– ಮಾನ್ಯ ಅಧ್ಯಕ್ಷರೆ,

ರಾಜ್ಯದಲ್ಲಿ ಮೊದಲಿಗೆ ಬೆಂಗಳೂರು ಆನಂತರ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ 17 ಮತ್ತು ಧಾರವಾಡದ ವ್ಯಾಪ್ತಿಗೆ '7 ಜಿಲ್ಲೆಗಳು ಒಳಗೊಂಡಿವೆ. ಮೊದಲಿಗೆ ಅವಿಭಜಿತ ಧಾರವಾಡದ ವ್ಯಾಪ್ತಿಯಲ್ಲಿದ್ದ 5 ಜಿಲ್ಲೆಗಳನ್ನು ಪ್ರತ್ಯೇಕಗೊಳಿಸಿ ನೂತನ ರಾಯಚೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಿದ್ದು ಸದರಿ ರಾಯಚೂರು ಕೃಷಿ ವಿಶ್ವವಿದ್ಯಾಲಯವು ದಿನಾಂಕ: 01–04–2009ರಿಂದ ಸ್ವಂತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಮಲೆನಾಡು ಪ್ರದೇಶದಲ್ಲಿನ ವಿಶಿಷ್ಟ ಬೆಳೆಗಳ ಅಧ್ಯಯನ ಮತ್ತು ಸಂಶೋಧನೆಗಾಗಿ ಶಿವಮೊಗ್ಗದಲ್ಲಿ ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ಕಾಯ್ದೆಗಳಿಗೆ ತಿದ್ದುಪಡಿ ಆಗಿಲ್ಲವಾದ್ದರಿಂದ ಈ ಶಿವಮೊಗ್ಗ ವಿಶ್ವವಿದ್ಯಾಲಯವು ಕಾನೂನುಬದ್ಧವಾಗಿ ಇನ್ನೂ ಅಸ್ತಿತ್ವಕ್ಕೆ ಬಂದಿರುವುದಿಲ್ಲ. ಬೆಂಗಳೂರಿನ ವ್ಯಾಪ್ತಿಗೆ ಒಳಪಟ್ಟಿರುವ 17 ಜಿಲ್ಲೆಗಳ ಪೈಕಿ 7 ಜಿಲ್ಲೆಗಳನ್ನು ಶಿವಮೊಗ್ಗದ ವ್ಯಾಪ್ತಿಗೆ ಒಳಪಡಿಸಿದ್ದು ಅದರಲ್ಲಿ ಹಾಸನವೂ ಸೇರಿರುತ್ತದೆ. ಆದುದರಿಂದ ಪ್ರಸ್ತುತ ಶಿವಮೊಗ್ಗ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಿರುವ ಹಾಸನ ಜಿಲ್ಲೆಯು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವೇ ಹಾಸನ ಜಿಲ್ಲೆಯ ಕಾಲೇಜುಗಳ ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ.

2. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ 17 ಜಿಲ್ಲೆಗಳ ಪೈಕಿ ಬೆಂಗಳೂರು, ಮಂಡ್ಯ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೃಷಿ ಕಾಲೇಜುಗಳಿರುತ್ತವೆ.

ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಅರಣ್ಯ ಮಹಾವಿದ್ಯಾಲಯವಿದ್ದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ರೇಷ್ಮೆ ಕಾಲೇಜು ಇರುತ್ತದೆ. ಸದರಿ 6 ಕಾಲೇಜುಗಳಲ್ಲಿನ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕ ವೃಂದಗಳಲ್ಲಿನ ಒಟ್ಟು 551 ಮಂಜೂರಾದ ಹುದ್ದೆಗಳ ಪೈಕಿ 356 ಹುದ್ದೆಗಳು ಭರ್ತಿಯಾಗಿದ್ದು 195 ಬೋಧಕರ/ ಉಪನ್ಯಾಸಕರ ಹುದ್ದೆಗಳು ಖಾಲಿಯಿವೆ. ಅಂತೆಯೇ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಕಾಲೇಜು–ಸಂಸ್ಥೆಗಳಲ್ಲಿ ಬೋಧಕೇತರ ಸೇವಾ ಸಿಬ್ಬಂದಿಯ ಒಟ್ಟು 1905 ಮಂಜೂರಾದ ಹುದ್ದೆಗಳ ಪೈಕಿ 1047 ಹುದೆಗಳು ಭರ್ತಿಯಾಗಿದ್ದು 858 ಹುದ್ದೆಗಳು ಖಾಲಿಯಿವೆ. ಒಟ್ಟಾರೆ ಶೇ. 45ರಷ್ಟು ಹುದ್ದೆಗಳು ಖಾಲಿ ಇರುವುದಾಗಿ ಕಂಡುಬರುತ್ತದೆ. ಸದರಿ ಹುದ್ದೆಗಳ ಪೈಕಿ ಶೇ. 50 ರಷ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕೋರಿತ್ತು. ಪ್ರಸ್ತಾವನೆಯನ್ನು ಪರಿಶೀಲಿಸಿ ಅರ್ಥಿಕ ಇಲಾಖೆಯ ಸೂಚನೆ–ಸಹಮತಿಯಂತೆ, ಸಹಾಯಕ ಪ್ರಾಧ್ಯಾಪಕರ 45 ಮತ್ತು ಗ್ರೂಪ್–ಸಿ ವೃಂದದ (ಯಾವುದಾದರೂ) 30 (ಸೇವಾ ಸಿಬ್ಬಂದಿ) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ದಿನಾಂಕ: 16/07/2012ರಂದು ಆದೇಶದಲ್ಲಿ ಅನುಮತಿಯನ್ನು ನೀಡಲಾಗಿದೆ.

3. ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ 2012–13ನೇ ಸಾಲಿಗೆ ಯೋಜನೆ ಅಡಿಯಲ್ಲಿ ಕೃಷಿ ಸಂಶೋಧನೆಗಾಗಿ 1450, ಕೃಷಿ ಶಿಕ್ಷಣಕ್ಕಾಗಿ 1650 ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಾಗಿ 1900 ಗಳಂತೆ ಒಟ್ಟು ರೂ.5000 ಲಕ್ಷಗಳನ್ನು ಆಯವ್ಯಯದಲ್ಲಿ ಮೀಸಲಿಡಲಾಗಿದೆ. ಅಂತೆಯೇ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಇತರ ವೆಚ್ಚಗಳಿಗಾಗಿ ಯೋಜನೇತರ ಬಾಬಿನಲ್ಲಿ ರೂ.7500 ಪಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಯೋಜನೆ ಮತ್ತು ಯೋಜನೇತರ ಬಾಬುಗಳಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು ಈ ಅನುದಾನದಲ್ಲಿ ಕೃಷಿ ವಿಶ್ವವಿದ್ಯಾಲಯವು ಅದಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತದೆ.

4. ಹಾಸನದ ಕೃಷಿ ಕಾಲೇಜಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು ಪರಿಷ್ಕೃತ ಅಂದಾಜು ಮೊತ್ತ ರೂ. 3674 ಲಕ್ಷಗಳಿಗೆ ಅನುಮೋದನೆ ನೀಡುವಂತೆ ಕೃಷಿ ವಿಶ್ವವಿದ್ಯಾಲಯವು ಮಾಡಿದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

5. ಶಿವಮೊಗ್ಗಕ್ಕೆ ಸಂಬಂಧಿಸಿದಂತೆ 2012–13ನೇ ಸಾಲಿಗೆ ಯೋಜನೆ ಬಾಬ್ತು ರೂ. 2290 ಲಕ್ಷಗಳನ್ನು ಆಯವ್ಯಯದಲ್ಲಿ ಆಸ್ತಿಗಳ ಸೃಜನೆಯ ಸಲುವಾಗಿ ಹಂಚಿಕೆ ಮಾಡಲಾಗಿದೆ. ಈ ಬಾಬ್ತು ಪ್ರಾರಂಭಿಕ ಉದ್ದೇಶಗಳಿಗಾಗಿ ರೂ. 200 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಅಂತೆಯೇ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಸಲುವಾಗಿ ರೂ. 1860 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು ಸಕ್ಷಮ ಪ್ರಾಧಿಕಾರದ ಅನುಮೋದನೆಯ ಮೇರೆಗೆ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

6. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಬೋಧಕರ/ಉಪನ್ಯಾಸಕರ ಒಟ್ಟು 166 ಹುದ್ದೆಗಳು ಖಾಲಿಯಿದ್ದು ಇವುಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ಕೋರಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ಸಲ್ಲಿಸಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

7. ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ 2012–13ನೇ ಸಾಲಿಗೆ ಯೋಜನೆ ಅಡಿಯಲ್ಲಿ ಕೃಷಿ ಸಂಶೋಧನೆಗಾಗಿ 1750, ಕೃಷಿ ಶಿಕ್ಷಣಕ್ಕಾಗಿ 1350 ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಾಗಿ 1900 ಗಳಂತೆ ಒಟ್ಟು ರೂ.5000 ಲಕ್ಷಗಳನ್ನು ಆಯವ್ಯದಲ್ಲಿ ಮೀಸಲಿಡಲಾಗಿದೆ. ಅಂತೆಯೇ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಇತರ ವೆಚ್ಚಗಳಿಗಾಗಿ ಯೋಜನೇತರ ಬಾಬಿನಲ್ಲಿ ರೂ. 5300 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಯೋಜನೆ ಮತ್ತು ಯೋಜನೇತರ ಬಾಬುಗಳಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು ಈ ಅನುದಾನದಲ್ಲಿ ಕೃಷಿ ವಿಶ್ವವಿದ್ಯಾಲಯವು ಅದಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಿಮ್ಮ ಜಿಲ್ಲೆಯಲ್ಲಿರುವ ಕೃಷಿ ಕಾಲೇಜಿಗೆ ಲೆಕ್ಚರರ್‌ಗಳಿಲ್ಲ. ಉತ್ತರದಲ್ಲಿ ಹೇಳಿರುವಂತೆ ಮಂಜುರಾಗಿರುವ ಹುದ್ದೆಗಳು 1,905. ಅದರಲ್ಲಿ 1,047 ಹುದೆಗಳು ಮಾತ್ರ ಭರ್ತಿಯಾಗಿದ್ದು ಇನ್ನು 858 ಹುದ್ದೆಗಳು ಖಾಲಿಯಿವೆ. ರೈತರ ಮಕ್ಕಳು ವಿದ್ಯಾಭ್ಯಾಸ ಮಾಡುವಂಥ ಕಾಲೇಜುಗಳಲ್ಲಿ ಲೆಕ್ಚರ್‌ಗಳಿಲ್ಲ. ಇವುಗಳನ್ನು ಯಾವಾಗ ತುಂಬುತ್ತೀರಿ ಎಂದು ದಯಮಾಡಿ ಕೃಷಿ ಸಚಿವರು ಹೇಳಬೇಕು. ಏಕೆಂದರೆ, ಅವರೂ ಸಹ ಕೃಷಿ ಕುಟುಂಬದಲ್ಲಿ ಹುಟ್ಟಿ ಬಂದಿರುವವರು. ಅದರ ಜೊತೆಗೆ ಮತ್ತೊಂದು ವಿಷಯವನ್ನು ಸಚಿವರ ಗಮನಕ್ಕೆ ತರುವುದೇನೆಂದರೆ, ಹಾಸನ ಕೃಷಿ ಕಾಲೇಜಿಗೆ ಮೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಆರು ವರ್ಷಗಳಾಗಿದೆ. ಆರು

ವರ್ಷಗಳಿಂದ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕಾಗಿಲ್ಲ. ಹಾಸನದ ಕೃಷಿ ಕಾಲೇಜಿಗೆ ಲೆಕ್ಚರರ್‌ಗಳನ್ನು ನೇಮಕ ಮಾಡಬೇಕು ಮತ್ತು ಆ ಕಾಲೇಜಿಗೆ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:– ರೇವಣ್ಣನವರು ಕೇಳಿದ ಪ್ರಶ್ನೆಗೆ ನಾನು ಈಗಾಗಲೇ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಖಾಲಿಯಿರುವ ಹುದ್ದೆಗಳನ್ನು ತುಂಬಬೇಕೆಂದು ವಿಶ್ವವಿದ್ಯಾಲಯದವರು ಈಗಾಗಲೇ ಮನವಿ ಮಾಡಿದ್ದಾರೆ. ಕೆಲವು ಹುದ್ದೆಗಳನ್ನು ತುಂಬಲು ಈಗಾಗಲೇ ಪರ್ಮಿಷನ್‌ಅನ್ನು ಕೊಟ್ಟಿದ್ದೇವೆ. ಹಂತಹಂತವಾಗಿ, ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ:– ದಯಮಾಡಿ ಆದಷ್ಟು ಬೇಗನೆ ಎಲ್ಲಾ ಹುದ್ದೆಗಳನ್ನು ತುಂಬಬೇಕು. ಏಕೆಂದರೆ, ಬಡವರ ಮಕ್ಕಳು ಓದುತ್ತಿರುವ ಕಾಲೇಜುಗಳಿವು. ಸಾಹುಕಾರರ ಮಕ್ಕಳ್ಯಾರೂ ಇಲ್ಲಿ ಬಂದು ಓದುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ:– ವಿಶೇಷವಾಗಿ ಹಾಸನ ಜಿಲ್ಲೆಗೆ ಆದಷ್ಟು ಬೇಗನೆ ಮಾಡುತ್ತೇವೆ.

10. ವಿಷಯ:– ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಸಂರಕ್ಷಣೆ ಮಾಡದಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಸಂರಕ್ಷಣೆ ಮಾಡದೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವ್ಯತಿರಿಕ್ತವಾಗಿ ತಾರತಮ್ಯ ಮಾಡಿರುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಸರ್ಕಾರದ ಅನುದಾನಿತ ಸಂಸ್ಥೆಯಿಂದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸಹಾಯಕ ಪ್ರಾಧ್ಯಾಪಕರಾಗಿ ಹಾಗೂ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ ಕೆಲವು ಬೋಧಕವರ್ಗದವರು 2010ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ವೃಂದಕ್ಕೆ ಆಯ್ಕೆಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.